ಸಾಕ್ಷಿಯನ್ನು ದಿಃ 17-06-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಎಮ್ ಎಸ್ ಬಿ ವಕೀಲರಿಂದಃ (ಎದುರುದಾರರ ಪರ )**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿರುವ ಎಲ್ಲ ವಿಷಯಗಳನ್ನು ನಾನೇ ಹೇಳಿ ಬರೆಯಿಸಿದ್ದು, ಸದರಿ ವಿಷಯಗಳು ಸರಿಯಾಗಿದ್ದು, ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಎಮ್ ಎ ಪಿ ವಕೀಲರಿಂದ (ಅರ್ಜಿದಾರರ ಪರವಾಗಿ)**

1 ನೇ ಎದುರುದಾರ ನನ್ನ ಚಿಕ್ಕಪ್ಪನ ಮಗ. ನಾನು ಪಿಯುಸಿಯವರೆಗೆ ಓದಿದ್ದೇನೆ. ಸಾಮಾನ್ಯವಾಗಿ ನಡೆದ ಘಟನೆಯ ಬಗ್ಗೆ ದೂರು ಸಲ್ಲಿಸಿದಾಗ ಪೊಲೀಸ ಪ್ರಕರಣ ದಾಖಲಾಗಿರುತ್ತವೆ ಮತ್ತು ನ್ಯಾಯಾಲಯಕ್ಕೆ ವರದಿ ಸಲ್ಲಿಕೆಯಾಗಿರುತ್ತವೆ ಎಂದರೆ ಕೆಲವೊಂದು ಘಟನೆಗಳು ದಾಖಲಾಗುತ್ತವೆ ಕೆಲವೊಂದು ಆಗಿರುವುದಿಲ್ಲ ಎಂದು ಹೇಳುತ್ತಾರೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರ ಜೊತೆಯೂ ಪೊಲೀಸ ಠಾಣೆಗೆ ಹೋಗಿಲ್ಲ. ಸಂಗಪ್ಪ ನವಲಗುಂದ ಯಾರು ಎಂದರೆ ಆತ ಅಪಘಾತದಲ್ಲಿ ಗಾಯಗೊಂಡ ಗಾಯಳು ಎಂದು ಹೇಳುತ್ತಾರೆ. ಆತ ಕುಡಿದ ನಿಶೆಯಲ್ಲಿ ಬಿದ್ದು ಗಾಯಗೊಂಡಿದ್ದಾನೆ. ಆತ ಕುಡಿದ ನಿಶೆದಲ್ಲಿ ಬಿದ್ದು ಗಾಯಗೊಂಡಿದ್ದಾನೆ ಎಂದು ನಾನು ದೂರು ಸಲ್ಲಿಸಿಲ್ಲ. ಅಪಘಾತ ಸಮಯದಲ್ಲಿ ನಾನು ಟ್ರಾಕ್ಟರ್ ಮಟಗಾಡ ಮೇಲೆ ಕುಳಿತಿದ್ದೆ, ಟ್ರಾಕ್ಟರ ನಿಂತತ್ತು ಆಗ ಸಂಗಪ್ಪ ಮೋಟಾರ್ ಸೈಕಲ್ ಮೇಲೆ ಬಂದು ಟ್ರಾಕ್ಟರಗೆ ಹಾಯಿಸಿ ಬಿದ್ದು ಗಾಯಗೊಂಡಿದ್ದಾನೆ. ಕೂಡಲೇ ನಾನು ಮತ್ತು 1 ನೇ ಎದುರುದಾರ ಪ್ರವೀಣ ಟ್ರಾಕ್ಟರ್ ನಿಂದ ಇಳಿದು ಸಂಗಪ್ಪನಿಗೆ ನೀರು ಕುಡಿಸಿದೆವು. ನಂತರ ಏನಾಯಿತು ಗೊತ್ತಿಲ್ಲ. ಆ ದಿನ 1 ನೇ ಎದುರುದಾರ ಪ್ರವೀಣ ಟ್ರಾಕ್ಟರ ಚಲಾಯಿಸುತ್ತಿದ್ದ. ಆ ಸಮಯದಲ್ಲಿ ಪ್ರವೀಣ ಅಲ್ಪವಯಿಯಾಗಿದ್ದ ಎಂದರೆ ನಾನು ಆತನ ವಯಸ್ಸು ಕೇಳಿರಲಿಲ್ಲ ಎಂದು ಹೇಳುತ್ತಾರೆ. 1 ನೇ ಎದುರುದಾರನ ವಿರುದ್ಧ ದೋಷಾರೋಪಣಾ ಪಟ್ಟಿ ದಾಖಲಾಗಿದೆ ಎಂದರೆ ಗೊತ್ತಿಲ್ಲ.

ಅರ್ಜಿದಾರ ಮಧ್ಯಪಾನ ಮಾಡಿದ್ದನ್ನು ನಾನು ನೋಡಿಲ್ಲ ಆದರೆ ಆತನ ಪರಿಸ್ಥಿತಿ ನೋಡಿದರೆ ಕುಡಿದಂತೆ ಕಾಣುತ್ತಿದ್ದ. ಸಾಕ್ಷಿ ಮುಂದುವರೆದು ಅರ್ಜಿದಾರನ ಮೋಟಾರ ಸೈಕಲ್ ಪಾಕೆಟ್ ನಲ್ಲಿ ಸರಾಯಿ ಪಾಕೆಟ್ ಗಳು ಇದ್ದವು ಎಂದು ಹೇಳುತ್ತಾರೆ. ಅರ್ಜಿದಾರ ಸರಾಯಿ ಕುಡಿದು ಮೋಟಾರ್ ಸೈಕಲ್ ಚಲಾಯಿಸಿ ಟ್ರಾಕ್ಟರ್ ಗೆ ಡಿಕ್ಕಿಪಡಿಸಿ ಅಪಘಾತಪಡಿಸಿಕೊಂಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ನಂತರ ಅರ್ಜಿದಾರನಿಗೆ ಪರಿಹಾರ ಕೊಡುವ ವಿಚಾರವಾಗಿ ಊರ ಹಿರಿಯರು ಕೂಡಿದ್ದರು ಎಂದರೆ ನೆನಪಿಲ್ಲ. ಅಪಘಾತದ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ದೋಷಾರೋಪಣಾ ಪಟ್ಟಿಯಲ್ಲಿ ನನ್ನನ್ನು ಸಾಕ್ಷಿದಾರ ಎಂದು ತೋರಿಸಲಾಗಿದೆ ಎಂದರೆ ಸರಿ. ಅರ್ಜಿದಾರರಿಗೆ ಪರಿಹಾರ ನೀಡಲು ಎದುರುದಾರರು ಬಾಧ್ಯಸ್ಥರಾಗಿದ್ದು, ಅವರನ್ನು ಪರಿಹಾರ ನೀಡುವ ಜವಾಬ್ದಾರಿಯಿಂದ ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.